(ಅ) ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ವಿಧೇಯಕ, 1997 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ

''1997ರ ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ★ವಿಧೇಯಕವನ್ನು ಮಂಡಿಸಲಾಗಿದೆ.★

ಅಧ್ಯಕ್ಷರು: ಈಗ ನಿಯಮ 69ರ ಅಡಿಯಲ್ಲಿ ಚರ್ಚೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಶ್ರೀ ವಾಟಾಳ್ ನಾಗರಾಜ್‌ರವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಿಜವಾಗಿಯೂ ಈ ವೀರಪ್ಪನ್ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಚರ್ಚೆ ಆಗಬೇಕೆಂದು ವಿರೋಧ ಪಕ್ಷದ ಕಡೆಗೆ ಕುಳಿತಿರುವಂಥ ಎಲ್ಲರ ಅಪೇಕ್ಷೆ ಆಗಿದೆ. ಇದರ ಬಗ್ಗೆ ಬೇರೆ ರೂಪದಲ್ಲಿ ನಾವು ನೋಟೀಸ್ ಕೊಡೋಣ. ಮಾನ್ಯ ಅಧ್ಯಕ್ಷರ ಕೊಠಡಿಗೆ ಹೋಗಿ, ನಾಳೆ ಈ ವಿಚಾರದ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ವಿನಂತಿ ಮಾಡಿ, ಕನ್‌ವಿನ್ಸ್ ಮಾಡಿ ಬೇರೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೇಳೋಣ. ದಯಮಾಡಿ ಈಗ ತಾವು ತಮ್ಮ ಸ್ಥಾನಕ್ಕೆ ಬನ್ನಿ. ಮಾನ್ಯ ಅಧ್ಯಕ್ಷರು ಚರ್ಚೆಗೆ ಅವಕಾಶ ಕೊಟ್ಟೇ ಕೊಡುತ್ತಾರೆ. ಧರಣಿ ನಿಲ್ಲಿಸಿ ತಾವು ತಮ್ಮ ಸ್ಥಾನಕ್ಕೆ ಹಿಂದಿರುಗಿ ಮಾನ್ಯ ನಾಗರಾಜ್‌ರವರೇ. ನಾವು ಎಲ್ಲರೂ ಸೇರಿ ಬೇರೆ ರೂಪದಲ್ಲಿ ನೋಟೀಸ್ ಕೊಡೋಣ. ಶೂನ್ಯ ವೇಳೆಯಲ್ಲಿ ಹೆಚ್ಚು ಹೊತ್ತು ಚರ್ಚೆ ಮಾಡಲು ಅವಕಾಶವಿಲ್ಲ ಎಂದು ಮಾನ್ಯ ಅಧ್ಯಕ್ಷರು ಹೇಳುತ್ತಿದ್ದಾರೆ. ನಾವೆಲ್ಲರೂ ನಿಮ್ಮ ಜೊತೆಗೆ ಇದ್ದೇವೆ. ನಮ್ಮ ರಾಜ್ಯದ ಜನತೆಗೆ ಅನ್ಯಾಯವಾಗಿದೆ. ಚರ್ಚೆ ಆಗಲೇ ಬೇಕು ಎಂದು ನಾವು ಕೂಡ ಹೇಳುತ್ತಿದ್ದೇವೆ. ಅದರಲ್ಲೇನೂ ಎರಡು ಮಾತಿಲ್ಲ.

★ ಅನುಬಂಧ I & II

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಧರಣಿ ಬಿಟ್ಟು ತಮ್ಮ ಸ್ಥಾನಕ್ಕೆ ಬರಲಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದೇ ವಿಷಯವನ್ನು ನಿಯಮ 69ರ ಕೆಳಗೆ ಚರ್ಚೆಗೆ ಅವಕಾಶ ಕೊಡುವಂತೆ ಕೋರಿ ನೋಟೀಸ್ ಕೊಡೋಣ. ನಾಳೆ ಅರ್ಧ ಗಂಟೆ ಚರ್ಚೆ ಮಾಡೋಣ.

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೆ, ಅಪ್ರೊಪ್ರಿಯೇಟ್ ಟೈಮ್ ಯಾವಾಗ ಎನ್ನತಕ್ಕಂಥದ್ದು ಅದು ನಿಮಗೆ ಬಿಟ್ಟಿದ್ದುದು. ಈ ವಿಷಯ ಮಾತ್ರ ಚರ್ಚೆ ಆಗಲೇ ಬೇಕು. ಅಪ್ರೊಪ್ರಿಯೇಟ್ ಟೈಮ್ ಯಾವಾಗ? ಯಾವ ಹಂತದಲ್ಲಿ ಆಗಬೇಕು? ಅದರ ಬಗ್ಗೆ ಅಧ್ಯಕ್ಷರೇ ತೀರ್ಮಾನ ಮಾಡಿಕೊಳ್ಳಬೇಕು. ದಯಮಾಡಿ ಇದರ ಬಗ್ಗೆ ಮಾತ್ರ ಚರ್ಚೆ ಆಗಲೇಬೇಕು.

ಅಧ್ಯಕ್ಷರು: ಆಗಬಹುದು.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಅಧ್ಯಕ್ಷರೆ, ನಿಯಮದಡಿಯಲ್ಲಿ ಅವರು ನೋಟೀಸನ್ನು ಕಳುಹಿಸಿಕೊಡಲಿ. ಕಳುಹಿಸಿ ಆದಮೇಲೆ ಸರ್ಕಾರದ ವತಿಯಿಂದ ಯಾವ ಯಾವ ಮಾಹಿತಿ ಬೇಕೋ ಸರ್ಕಾರದ ವತಿಯಿಂದ ಆ ಮಾಹಿತಿಯನ್ನು ನಾವು ಕೊಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ವಿಶೇಷ ಚರ್ಚೆ ಆಗಬೇಕೆಂದು ನಾವು ಒತ್ತಾಯ ಮಾಡುತ್ತಿದ್ದರೆ, ಅದರಿಂದ ಅಧ್ಯಕ್ಷರೂ ಕೂಡ ಅದಕ್ಕೆ ಒಪ್ಪಿದ್ದಾರೆ, ಆದ್ದರಿಂದ ಮಾನ್ಯ ನಾಣಯ್ಯನವರು 'ಆಗಬಹುದು' ಎಂದು ಹೇಳುವ ಬದಲು ಎಲ್ಲಾ ಮಾಹಿತಿಯನ್ನು ಕೊಡುತ್ತೇವೆ....

SRI M.C.NANAIAH:- At the appropriate time when the matter comes up whatever information you want, the government is prepared to give it.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಅವರು 9 ಜನ ಬಂದಿರುವುದರಿಂದ ಈಗ ಅಂಥಹ ಸಮಸ್ಯೆ ಏನೂ ಬರುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇನ್ನು ಈ ಬಗ್ಗೆ ಚರ್ಚೆ ಮಾಡುವುದಕ್ಕೇನೂ ಅಂಥಹ ಕಷ್ಟ ಆಗುವುದಿಲ್ಲ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಧರಣಿ ಕೈಬಿಟ್ಟು ತಮ್ಮ ಸ್ವಸ್ಥಾನಕ್ಕೆ ಮರಳಿದರು).